# ವಧುವಿನ ಕೇಶವಿನ್ಯಾಸ ಮೊಗದಲ್ಲಿ ಲಾಸ್ಯ!

■ ಗೌರಮ್ಮ ಕಟ್ಟಿಮನಿ

ಈ ಸೀರೆ ಅಥವಾ ಆ ಡ್ರೆಸ್‌ಗೆ ಯಾವ ತರಹದ ಹೇರ್‌ಸ್ಟೈಲ್ ಮಾಡಿದ್ರೆ ಚಂದ, ಯಾವ ಹೂವು ಮುಡಿದರೆ ಒಳ್ಳೆಯದು, ತಲೆಗೂದಲು ಬಿಟ್ಟರೆ ಚೆನ್ನಾಗಿ ಕಾಣುತ್ತಾ ಅಥವಾ ಜಡೆ ಹಾಕೋದಾ...?

ಹೀಗೆ ಸಾಲು ಸಾಲು ಗೊಂದಲಗಳು ವಧುವಿನ ಮನದಲ್ಲಿ ಮೂಡುವುದು ಸಹಜ. ಮದುವೆ ಎಂದರೆ ಕೇವಲ ಶಾಪಿಂಗ್, ಆಭರಣ ಖರೀದಿಸುವುದು ಮಾತ್ರವಲ್ಲ, ಕೇಶವಿನ್ಯಾಸ ಯಾವ ರೀತಿ ಮಾಡಿಸಬೇಕು ಎನ್ನುವುದು ಮುಖ್ಯ. ಮದುವೆಯ ವಿವಿಧ ಶಾಸ್ತ್ರಗಳಲ್ಲಿ ವಧು ವಿಭಿನ್ನ ಲುಕ್‌ನಲ್ಲಿ ಕಾಣಿಸಲು ಕೇಶವಿನ್ಯಾಸ ಸಹ ಮುಖ್ಯವಾಗುತ್ತದೆ. ಅದಕ್ಕೂ ಮುನ್ನ ಮಾಡಿಸುವ ಪ್ರಿ ವೆಡ್ಡಿಂಗ್ ಶೂಟ್ ಇತ್ತೀಚಿನ ಟ್ರೆಂಡ್ ಆಗಿದ್ದು, ವಿವಿಧ ರೀತಿಯ ಕೇಶವಿನ್ಯಾಸಗಳು ಚಾಲ್ತಿಯಲ್ಲಿವೆ.

ಸಾಂಪ್ರದಾಯಿಕ ಶೈಲಿಯ ಪ್ರಿ ವೆಡ್ಡಿಂಗ್ ಶೂಟ್‌ನಲ್ಲಿ ಉದ್ದ ಜಡೆ, ಅಥವಾ ತುರುಬು ಹಾಕಲಾಗುತ್ತದೆ. ಪಾಶ್ಚಾತ್ಯ ಶೈಲಿಯಲ್ಲಾದರೆ ಫ್ರೀ ಹೇರ್ (ಕೂದಲು ಬಿಡುವುದು), ಕರ್ಲಿ (ಗುಂಗುರು ಅಥವಾ ಸುರುಳಿ) ಹೇರ್‌ಸ್ಟೈಲ್ ಮಾಡಲಾಗುತ್ತದೆ.

ವಧುವಿನ ಉಡುಪಿಗೆ ತಕ್ಕಂತೆ ಕೇಶವಿನ್ಯಾಸ ಮಾಡಬೇಕು. ಮೆಹೆಂದಿ ಶಾಸ್ತ್ರ ಮಾಡುವಾಗ ಸಾಮಾನ್ಯವಾಗಿ ಲೆಹೆಂಗಾ ಅಥವಾ ಸ್ಲೀವ್‌ಲೆಸ್ ಪಲಾಜೊ ಧರಿಸುವುದು ಇಂದಿನ ಟ್ರೆಂಡ್.

ಸಂಗೀತ ಸಮಾರಂಭದಲ್ಲಿ ವಧು ಸಹ ನೃತ್ಯ ಮಾಡುವುದರಿಂದ ಹಾಗೂ ಕ್ಯಾಂಡಿಡ್ ಫೋಟೊ ಸೆರೆಹಿಡಿಯಲು ಸುಲಭವಾಗುವಂತೆ ಹಾಗೂ ಸುಂದರವಾಗಿ ಕಾಣಲು ಚಿಕ್ಕ ಕ್ಲಿಪ್‌ನಿಂದ ಸ್ವಲ್ಪ ಕೂದಲನ್ನು ಹಿಡಿದು, ಹಿಂಭಾಗದಲ್ಲಿ ಕೂದಲು ಬಿಡಲಾಗುತ್ತದೆ. ಅಂದರೆ ಓಪನ್ ಹೇರ್‌ಸ್ಟೈಲ್ ಇದಕ್ಕೆ ಸೂಕ್ತವಾಗಿದೆ.

‘ಬಹುತೇಕರು ಮೂರು ರೀತಿಯ ಕೇಶವಿನ್ಯಾಸ ಮಾಡಿಸಿಕೊಳ್ಳುತ್ತಾರೆ.



